ಪ್ರಕಟಣೆಗಾಗಿ

ಚಿತ್ರದುರ್ಗ ಫೆ. 6 : ಮಾನವ ಯಾವೊತ್ತಿಗೂ ಸುಖದ ಅನ್ವೇಷಕ. ಎಲ್ಲಕ್ಕೂ ಮೂಲ ಸುಖ. ಜೀವನ ಎಂಬುದು ಗುಲಾಬಿಯ ಹಾಸಿಗೆಯೆಂದು ವ್ಯಕ್ತಿ ಭಾವಿಸಿದ್ದಾನೆ. ಆದರೆ ಆತನಿಗೆ ನೆನಪಿಲ್ಲ ಅದರೊಂದಿಗೆ ಮುಳ್ಳುಗಳಿವೆ ಎಂಬುದು. ಹಾಗಾಗಿ ಕಷ್ಟಗಳ ನಡುವೆ ಸುಖವಿದೆ ಎಂಬ ಅರಿವು ಅವನಿಗಿರಬೇಕು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟರು.

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮತ್ತು ಎಸ್.ಜೆ.ಎಂ. ಆಂಗ್ಲಮಾಧ್ಯಮ ಶಾಲೆ ಚಿತ್ರದುರ್ಗ ಇವರ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಶರಣ ಸಂಗಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಶ್ರೀಗಳು ವ್ಯಕ್ತಿಯ ತಾಪ; ನಿಸರ್ಗದ ಕೋಪ ವಿಷಯ ಕುರಿತು ಚಿಂತನ ನೀಡಿದರು.

ದುಃಖದ ಸ್ಪರ್ಶವಿಲ್ಲದೆ ಸುಖದ ಆಸ್ವಾದನೆ ಸ್ವಾದ ಅನಿಸದು. ಹಾಗಾಗಿ, ಅಲ್ಲಮಪ್ರಭು, ಸಾಸಿವೆ ಸುಖಕ್ಕೆ ಸಾಗರದಷ್ಟು ದುಃಖ ನೋಡಾ ಎಂದಿದ್ದಾರೆ. ಮಾನವ ತನ್ನ ಸ್ವಾರ್ಥಕ್ಕಾಗಿ ಹಲವಾರು ಕರಾಮತ್ತುಗಳನ್ನು ಮಾಡುತ್ತಿದ್ದಾನೆ. ಅದಿರುಗಾಗಿ ನೆಲದ ಆಳವನ್ನು ಬಗಿದು ಭೂಮಿಯ ಸಮತೋಲನದ ಶಕ್ತಿ ಕುಂದಿಸುತ್ತಿದ್ದಾನೆ. ಪರ್ವತ ಪ್ರದೇಶಗಳನ್ನು ಕರಗಿಸುತ್ತಿದ್ದಾನೆ. ತನ್ನ ಅತಿರೇಕದ ವರ್ತನೆಯಿಂದ ನಿಸರ್ಗದ ಪ್ರಕೋಪಗಳಿಗೆ ಈಡಾಗುತ್ತಿದ್ದಾನೆ ಎಂದರು.

ಮರ್ಕಟದ ಕೈಯಲ್ಲಿ ಮಾಣಿಕ್ಯದಂತೆ ಅಣುಬಾಂಬ್‌ಗಳು ಆಧುನಿಕ ಮಾನವನ ಕೈಯಲ್ಲಿರುವುದು ಆತಂಕದ ವಿಚಾರ. ಮಳೆಯನ್ನು ತರಿಸುವ ಶಕ್ತಿ ಯಾವ ದೇವರಿಗೂ ಇಲ್ಲ. ಅದು ಮರಗಳಿಗೆ ಮಾತ್ರ ಇದೆ. ಹಾಗಾಗಿ ಪರಿಸರ ಸಂರಕ್ಷಣೆಯ ಜೊತೆಗೆ ಪ್ರಕೃತಿಯನ್ನು ನಂದನವನವನ್ನಾಗಿ ಮಾಡಬೇಕು ಎಂದು ಹೇಳಿದರು.

ಮುಖ್ಯಅತಿಥಿ ಜಗನ್ನಾಥ್ ನಾಡಿಗ್ ಮಾತನಾಡಿ, ವ್ಯಕ್ತಿಯ ಒಳಗಿನ ಆಸೆ ಎಂಬ ತಾಪ ನೇರವಾಗಿ ಪರಿಸರದ ಮೇಲೆ ಪ್ರಭಾವ ಬೀರುತ್ತಿದೆ. ಪರಿಸರ ವ್ಯಕ್ತಿಯ ಆಸೆಗಳನ್ನು ಪೂರೈಸುವ ಸಾಮರ್ಥ್ಯ ಹೊಂದಿದೆ ಆದರೆ ದುರಾಸೆಯನ್ನಲ್ಲ ಎಂಬ ಗಾಂಧೀಜಿಯವರ ಮಾತು ಸತ್ಯ ಎಂದು ನುಡಿದರು.

ಇದೇ ಸಂದರ್ಭದಲ್ಲಿ ಹಿರಿಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ಡಾ|| ರವಿಕುಮಾರ್ ಬಿ.ಎನ್. ಶ್ರೀಮಠದಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದರು. ಎಸ್.ಜೆ.ಎಂ. ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಪರಂಜ್ಯೋತಿ ಮತ್ತು ಸಿಬ್ಬಂದಿವರ್ಗದವರಿಗೆ ಶ್ರೀಗಳವರಿಗೆ ಗೌರವ ಸಮರ್ಪಿಸಿದರು.

ಜಮುರಾ ಕಲಾವಿದರು ವಚನ ಪ್ರಾರ್ಥನೆ ಮಾಡಿದರು. ಜಗದೀಶ್ ಎಸ್. ಸ್ವಾಗತಿಸಿದರು. ಶ್ರೀಮತಿ ಅನಿತಾ ಎಸ್. ನಿರೂಪಿಸಿದರು. ಪ್ರೀತಿ ಬಿ. ವಂದಿಸಿದರು.




ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಎಸ್.ಜೆ.ಎಂ. ಆಂಗ್ಲಮಾಧ್ಯಮ ಶಾಲೆ, ಚಿತ್ರದುರ್ಗ
ಸಂಗಮ
ವ್ಯಕ್ತಿಯ ತಾಪ: ನಿಸರ್ಗದ ಕೋಪ



